# ಕರ್ನಾಟಕ ವಿಧಾನ ಪರಿಷತ್ತು

## ಶ್ರೀಮತಿ ಹೇಮಲತಾ ನಾಯಕ್, ಮಾನ್ಯ ಸದಸ್ಯರು ವಿಧಾನ ಪರಿಷತ್ ರವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ.

**ವಿಷಯ :** ತಮಿಳುನಾಡು ಮೂಲಕ ಮಹಿಳೆಯೊಬ್ಬರು ಗಂಗಾವತಿ ತಾಲೂಕು ಸಣಾಪುರ ಬಳಿ ಹೋಮ್ ಸ್ಟೇ ನಡೆಸುತ್ತಾರೆ. ಈಕೆ ಮಾರ್ಚ್ 6ನೇ ತಾರೀಖು ರಾತ್ರಿ ಅಮೇರಿಕಾ ಪ್ರಜೆ ಡ್ಯಾನಿಯಲ್, ಇಸ್ರೇಲ್ ದೇಶದ ಮಹಿಳಾ ಪ್ರವಾಸಿ, ಮಹಾರಾಷ್ಟ್ರದ ನಾಸಿಕ್ ನ ಪಂಕಜ್ ಪಟೇಲ್ ಹಾಗೂ ಒರಿಸ್ಸಾದ ಬಿಬಾಸ್ ಎಂಬುವರನ್ನು ರಾತ್ರಿ ವಾಯು ವಿಹಾರಕ್ಕೆ ಕರೆದೊಯ್ದಿದ್ದಾರೆ. ನಿರ್ಜನ ಪ್ರದೇಶದಲ್ಲಿ ರಾತ್ರಿ ಸುಮಾರು 11.30ರ ವೇಳೆಗೆ, ಪ್ರವಾಸಿಗರು ಗೀಟಾರ್ ನುಡಿಸಿಕೊಂಡು ಕಾಲುವೆ ಮೇಲೆ ಕುಳಿತಿದ್ದಾಗ, ಬೈಕ್‌ನಲ್ಲಿ ಬಂದಿದ್ದ ಮೂವರು ಯುವಕರು, ಹಣ ಕೇಳುವ ನೆಪದಲ್ಲಿ ಬಂದು, ಪ್ರವಾಸಿಗರಿಂದ ಹಣದ ಬ್ಯಾಗ್ ಮತ್ತು ಮೊಬೈಲ್ ಕಿತ್ತುಕೊಂಡಿದ್ದಾರೆ.

ನಂತರ ರೆಸಾರ್ಟ್ ಒಡತಿ ಮತ್ತು ಇಸ್ರೇಲ್ ಮಹಿಳೆ ಮೇಲೆ ಸಾಮೂಹಿಕ ಅತ್ಯಾಚಾರ ಮಾಡಿದ್ದಾರೆ. ಅತ್ಯಾಚಾರ ತಡೆಯಲು ಬಂದ ಆಮೇರಿಕದ ಡ್ಯಾನಿಯಲ್, ಮಹಾರಾಷ್ಟ್ರ ಮೂಲದ ಪಂಕಜ್ ಪಟೇಲ್ ಹಾಗೂ ಒರಿಸ್ಸಾ ಮೂಲದ ವಿಬಾಸ್ ರನ್ನು ಕಾಲುವೆಗೆ  ತಳ್ಳಿ, ಕಾಲುವೆಯಿಂದ ಮೇಲೆ ಬರಲು ಯತ್ನಿಸಿದ ಬಿಬಾಸ್ ಮೇಲೆ ಆರೋಪಿಗಳು ಕಲ್ಲು ಎತ್ತಿ ಹಾಕಿದ್ದು, ಈಜು ಗೊತ್ತಿದ್ದರೂ ಮೇಲೆ  ಬರಲು ಸಾಧ್ಯವಾಗದೇ ಶನಿವಾರ ಶವವಾಗಿ ಪತ್ತೆ ಆಗಿದ್ದಾನೆ. ಅಮೇರಿಕಾದ ಡ್ಯಾನಿಯಲ್ ಎಂಬಾತ ಪಂಕಜ್ ರನ್ನು ರಕ್ಷಣೆ ಮಾಡಿ ಅವರು  ಪ್ರಾಣಾಪಾಯದಿಂದ ಪಾರಾಗಿದ್ದ.

ಘಟನೆಗೆ ಸಂಬಂಧಿಸಿದಂತೆ ಗಂಗಾವತಿ ಪೊಲೀಸರು, ಗಂಗಾವತಿಯ ಸಾಯಿನಗರದ ನಿವಾಸಿಗಳಾದ ಮಲ್ಲೇಶ ಅಲಿಯಾಸ್ ಮಲ್ಲ(22), ಚೇತನಸಾಯಿ ಶಿಲ್ಲೇಕ್ಯಾತರ್(21) ಎಂಬುವರನ್ನು ಬಂಧಿಸಿದ್ದಾರೆ.

ಇಡೀ ಘಟನೆಗೆ ಕೊಪ್ಪಳ ಪೊಲೀಸ್ ಮತ್ತು ಜಿಲ್ಲಾಡಳಿತ ವೈಫಲ್ಯ ಕಾರಣವಾಗಿದೆ. ದೇಶವೇ ತಲೆ ತಗ್ಗಿಸುವ ಈ ಘಟನೆಯಲ್ಲಿ ಪೊಲೀಸ್ ವೈಫಲ್ಯ ಎದ್ದು ಕಾಣುತ್ತಿದೆ. ವಿದೇಶಿ ಮಹಿಳೆ ಮೇಲೆ ಅತ್ಯಾಚಾರ ಮಾಡಿರುವ ಮೂರು ಆರೋಪಿಗಳು, ಈ ಹಿಂದೆಯೂ ಬೇರೆ ಬೇರೆ ಪ್ರಕರಣದಲ್ಲಿ ಪೊಲೀಸ ಠಾಣೆಗೆ ಬಂದು ಹೋಗಿದ್ದವರು. ಆರೋಪಿ ಮಲ್ಲೇಶ ಅಲಿಯಾಸ್ ಹಂದಿ ಮಲ್ಲ ನ ಮೇಲೆ ಗಂಗಾವತಿ ನಗರ ಮತ್ತು ಗ್ರಾಮೀಣ ಠಾಣೆಯಲ್ಲಿ ಅನೇಕ ಪ್ರಕಾರಣ ದಾಖಲಾಗಿವೆ. ಇತ್ತೀಚಿಗಷ್ಟೇ ಬಸವನ ಗ್ರಾಮದಲ್ಲಿ ಕಿರಾಣಿ ಅಂಗಡಿ ಮತ್ತು ಬೈಕ್ ಕಳ್ಳತನ ಮಾಡಿದ್ದರು. ಸಂಗಾಪುರ ಗ್ರಾಮದಲ್ಲಿ ಮಹಿಳಾ ಶಿಕ್ಷಕಿ ಮೇಲೆ ಹಲ್ಲೆ ಮಾಡಿದ್ದರು. ಈ ಪ್ರಕರಣ ಪೊಲೀಸ್ ಠಾಣೆ ಮೆಟ್ಟಿಲು ಏರಿದ್ದರೂ ಪ್ರಕರಣ ದಾಖಲಾಗಿಲ್ಲ. ಬದಲಾಗಿ ಪೊಲೀಸ್ ಠಾಣೆಯಲ್ಲೇ ರಾಜೀ-ಸಂದಾನ ನಡೆದಿವೆ. ತುಂಗಭದ್ರ ನದಿ ತೀರದಲ್ಲಿ ಮತ್ತು ನದಿ ತೀರದ ಗ್ರಾಮದಲ್ಲಿ ನೂರಾರು ರೆಸಾರ್ಟ್ ನಾಯಿ ಕೊಡೆಯಂತೆ ತಲೆ ಎತ್ತಿವೆ. ಬಹುತೇಕ ರೆಸಾರ್ಟ್, ಹೋಮ್ ಸ್ಟೇ ಗಳೂ ಭೂಮಿ NA ಮಾಡಿಲ್ಲ. ಯಾವುದೇ ಪರವಾನಗಿ ಪಡೆದಿಲ್ಲ. ಇವುಗಳ ಮೇಲೆ ಯಾರದ್ದೂ ಹಿಡಿತ ಇಲ್ಲ. ಹಂಪಿಗೆ ಬರುವ ದೇಶ, ವಿದೇಶಿ ಪ್ರವಾಸಿಗರಿಗೆ ಇವೇ ಮೋಜಿನ ತಾಣ ಆಗಿವೆ. ಇಲ್ಲಿ ಅನಧಿಕೃತ ಮದ್ಯ ಮಾರಾಟ ಸೇರಿ, ಎಲ್ಲ ರೀತಿಯ ಮಾದಕ ವಸ್ತು ಸಿಗುತ್ತವೆ ಎಂಬ ಆರೋಪ ಇದೆ. ಇದಕ್ಕೆಲ್ಲ ಪೊಲೀಸರ ಸಾತ್ ಇದೆ ಹಾಗೂ ಕೊಪ್ಪಳ ಪೊಲೀಸರು ರೆಸಾರ್ಟ್ ಮೇಲೆ ಅನಿರೀಕ್ಷಿತ ದಾಳಿ ಮಾಡಿ, ಎಷ್ಟು ಮಾದಕ ವಸ್ತು ವಶಕ್ಕೆ ಪಡೆದಿದ್ದಾರೆ ಮಾಹಿತಿ ನೀಡಲಿ ಎಂಬ ದೂರು ಸ್ಥಳೀಯರಿಂದ ಕೇಳಿ ಬಂದಿದೆ. ಆದರಿಂದ ಇಲಾಖೆ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೋರಿರುತ್ತಾರೆ.

**ಉತ್ತರ:**

ದಿನಾಂಕ: 06-03-2025 ರಂದು ಗಂಗಾವತಿ ತಾಲ್ಲೂಕು ಸಣಾಪೂರ ಕೆರೆ ಸಮೀಪದ ಕಾಲುವೆ ಹತ್ತಿರ 02 ಜನ ವಿದೇಶಿಗರು ಹಾಗೂ 03 ಜನ ಭಾರತೀಯರ ಮೇಲೆ 03 ಜನ ದುಷ್ಕರ್ಮಿಗಳು ಹಲ್ಲೆ ಮಾಡಿ ಇಸ್ರೇಲ್ ದೇಶದ ಮಹಿಳೆ ಹಾಗೂ ಭಾರತೀಯ ಮಹಿಳೆ ಮೇಲೆ ಹಲ್ಲೆ ಮಾಡಿ ಅತ್ಯಾಚಾರವೆಸಗಿದ್ದು, ಅಲ್ಲದೆ ಯು.ಎಸ್ ಪ್ರಜೆ ಸೇರಿದಂತೆ ಒಟ್ಟು 03 ಜನ ಪುರುಷರ ಮೇಲೆ ಸಹ ಹಲ್ಲೆ ಮಾಡಿ ಕೆನಾಲ್‌ಗೆ ನೂಕಿದ್ದರಿಂದ

ಒರಿಸ್ಸಾ ರಾಜ್ಯದ ಬಿಬಾಸ್ ಎನ್ನುವ ವ್ಯಕ್ತಿ ನೀರಿನಲ್ಲಿ ಮುಳಗಿ ಮೃತಪಟ್ಟಿದ್ದು, ಈ ಘಟನೆ ಹಿನ್ನೆಲೆಯಲ್ಲಿ ಹೋಂ ಸ್ಟೇ ಮಾಲೀಕಳು ನೀಡಿದ ದೂರಿನ ಸಾರಾಂಶದ ಮೇಲಿಂದ ದಿನಾಂಕ:07-03-2025 ರಂದು ಬೆಳಿಗ್ಗೆ, 11-15 ಗಂಟೆ ಸುಮಾರಿಗೆ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ Cr.No.73/2025 U/s 309 (6), 311, 64 (2) (L), 70(1), 109, 103 R/w 3(5) BNS-2023 ಪ್ರಕಾರ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿರುತ್ತದೆ. ಈ ಪ್ರಕರಣವನ್ನು ಸುಲಿಗೆ, ಕೊಲೆಯತ್ನ, ಗ್ಯಾಂಗ್ ರೇಪ್ ಮತ್ತು ಕೊಲೆ ಮುಂತಾದ ಅಪರಾಧಗಳ ಶೀರ್ಷಿಕೆಯಲ್ಲಿ ಪ್ರಕರಣ ದಾಖಲಿಸಲಾಗಿರುತ್ತದೆ.

ಪ್ರಕರಣದಲ್ಲಿನ ಆರೋಪಿತರುಗಳನ್ನು ಪತ್ತೆ ಮಾಡಲು ಒಟ್ಟು 6 ವಿಶೇಷ ತಂಡಗಳನ್ನು ರಚಿಸಿದ್ದು, ದಿನಾಂಕ:08-03-2025ರಂದು 2 ಜನ ಆರೋಪಿತರುಗಳಾದ 1] ಮಲ್ಲೇಶ @ ಹಂದಿ ಮಲ್ಲ ತಂದೆ ಅಯ್ಯಪ್ಪ ದಾಸರ, ಸಾ. ಸಾಯಿ ನಗರ ಗಂಗಾವತಿ, 2] ಚೇತನಸಾಯಿ ತಂದೆ ಕಾಮೇಶ್ವರ, ಸಾ. ಸಾಯಿ ನಗರ ಗಂಗಾವತಿ ರವರನ್ನು ದಸ್ತಗಿರಿ ಮಾಡಲಾಗಿರುತ್ತದೆ.

ದಿನಾಂಕ: 09-03-2025 ರಂದು ರಾತ್ರಿ ವೇಳೆಗೆ ತಮಿಳುನಾಡು ರಾಜ್ಯದ ಚೆನ್ನೈ ಮಹಾನಗರದಲ್ಲಿ ಆರೋಪಿ 3) ಶರಣ ಬಸವರಾಜ @ ಶರಣತಂದೆ ಬಾಲಪ್ಪ, ಸಾ: ಸಾಯಿನಗರ, ಗಂಗಾವತಿ ಇವನನ್ನು ವಶಕ್ಕೆ ಪಡೆದು ದಸ್ತಗಿರಿ ಕ್ರಮ ಜರುಗಿಸಲಾಗಿರುತ್ತದೆ.

ಪ್ರಕರಣದಲ್ಲಿನ ಆರೋಪಿತರ ಪೈಕಿ ಶರಣಬಸವರಾಜ @ ಶರಣ ತಂದೆ ಬಾಲಪ್ಪ, ಸಾಯಿನಗರ, ಗಂಗಾವತಿ ಇವನು ದಿನಾಂಕ: 18-11-2021 ಇಸ್ಪೀಟ್ ಜೂಜಾಟದಲ್ಲಿ ಭಾಗಿಯಾಗಿದ್ದು, ಅದರಂತೆ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಗುನ್ನೆ ಸಂ. 335/2021 ಕಲಂ 87 ಕೆ.ಪಿ ಆ್ಯಕ್ಟ್ ಅಡಿಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

ಅತ್ಯಾಚಾರ ಪ್ರಕರಣದಲ್ಲಿನ ಆರೋಪಿತರ ಪೈಕಿ ಶರಣ ಬಸವರಾಜ ಹಾಗೂ ಮಲ್ಲೇಶ @ ಹಂದಿ ಮಲ್ಲ ಇವರಿಬ್ಬರ ವಿರುದ್ಧ 2023ನೇ ಸಾಲಿನಲ್ಲಿ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಗುನ್ನೆ ಸಂ.128/2023 ಕಲಂ 109 ಸಿ.ಆರ್.ಪಿ.ಸಿ ಅಡಿಯಲ್ಲಿ ಕಾನೂನು ಕ್ರಮ ಜರುಗಿಸಲಾಗಿದೆ.

ಬಸವನದುರ್ಗ ಗ್ರಾಮದಲ್ಲಿ ಕಿರಾಣಿ ಅಂಗಡಿ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ: 01-03-2025 ರಂದು ಜಗದೀಶ ತಂದೆ ಬಸವಗೋಪಾಲ ರೆಡ್ಡಿ ರವರು ನೀಡಿದ ದೂರಿನ ಮೇರೆಗೆ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಗುನ್ನೆ ಸಂ.64/2025 ರನ್ವಯ ಪ್ರಕರಣ ದಾಖಲಾಗಿದೆ. ಬೈಕ್ ಕಳ್ಳತನಕ್ಕೆ ಸಂಬಂಧಿಸಿದಂತೆ ದಿನಾಂಕ:04-03-2025 ರಂದು ಬೋವಿ ವೆಂಕಟೇಶ ತಂದೆ ಕೆ.ಆರ್ ನಟರಾಜ್ ರವರು ನೀಡಿದ ದೂರಿನನ್ವಯ ಗಂಗಾವತಿ ಗ್ರಾಮೀಣ ಠಾಣೆಯಲ್ಲಿ ಗುನ್ನೆ ಸಂ.65/2025 ರನ್ವಯ ಪ್ರಕರಣ ದಾಖಲಾಗಿದೆ. ಎರಡೂ ಪ್ರಕರಣಗಳಲ್ಲಿ ಆರೋಪಿ ಪತ್ತೆ ಬಾಕಿಯಿದ್ದು, ಪ್ರಕರಣದ ತನಿಖೆ ಪ್ರಗತಿಯಲ್ಲಿರುತ್ತದೆ.

ಸಂಗಾಪೂರ ಗ್ರಾಮದಲ್ಲಿ ಮಹಿಳಾ ಶಿಕ್ಷಕಿಯ ಮೇಲೆ ಹಲ್ಲೆಗೆ ಸಂಬಂಧಿಸಿದಂತೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಯಾವುದೇ ದೂರು ದಾಖಲಾಗಿರುವುದಿಲ್ಲ.

ವಿದೇಶಿಗರ ಪ್ರವಾಸ ಕುರಿತು ಆಗಮಿಸುವ ಸ್ಥಳಗಳಾದ ಗಂಗಾವತಿ ಗ್ರಾಮೀಣ ಠಾಣೆ ಹಾಗೂ ಮುನಿರಾಬಾದ್ ಠಾಣೆಯ ವಿವಿಧೆಡೆಗಳಲ್ಲಿ ಅಕ್ರಮ ಮದ್ಯ ಹಾಗೂ ಮಾದಕ ವಸ್ತು ಬಳಕೆ ಕುರಿತು ಮಾಹಿತಿ ಸಂಗ್ರಹಿಸಿ ದಾಳಿ ನಡೆಸಿ ಈ ಕೆಳಕಂಡಂತೆ ಪ್ರಕರಣಗಳನ್ನು ದಾಖಲು ಮಾಡಲಾಗಿದೆ:-

| Sl. No | Police Station Name | Excise Cases | | | NDPS | | |
|---|---|---|---|---|---|---|---|
| . | | 20 23 | 2024 | 2025 up to 09th March | 2023 | 2024 | 2025 up to 09th March |
| 1 | Gangavthi Rural | 18 | 20 | 05 | 02 | 03 | 0 |
| 2 | Munirabad | 26 | 24 | 03 | 02 | 0 | 0 |
| 3 | Koppal Rural | 22 | 22 | 04 | 02 | 01 | 0 |
| | **Total** | **66** | **66** | **12** | **6** | **4** | **0** |

ರೆಸಾರ್ಟ್ & ಹೋಂ ಸ್ಟೇಗಳನ್ನು ನಡೆಸಲು ಪರವಾನಿಗೆ ನೀಡುವುದು ಪೊಲೀಸ್ ಇಲಾಖೆ ವ್ಯಾಪ್ತಿಗೆ ಒಳಪಡುವುದಿಲ್ಲ. ರೆಸಾರ್ಟ್, ಹೋಂ ಸ್ಟೇಗಳಲ್ಲಿ ಅನಧಿಕೃತವಾಗಿ ಮದ್ಯ ಮಾರಾಟ, ಮಾದಕ ವಸ್ತುಗಳ ಬಳಕೆ, ಸೇವನೆ, ಸಾಗಾಣಿಕೆ ಕಂಡುಬಂದಲ್ಲಿ ನಿರ್ದಾಕ್ಷಿಣ್ಯವಾಗಿ ಸೂಕ್ತ ಕಾನೂನು ಕ್ರಮ ಜರುಗಿಸಲಾಗುತ್ತಿದೆ.

ದಿನಾಂಕ: 09-03-2025 ರಂದು ಗಂಗಾವತಿ ನಗರದ ಡಿ.ಎಸ್.ಪಿ ರವರ ಕಛೇರಿಯಲ್ಲಿ ಹೊಂ ಸ್ಟೇ ಹಾಗೂ ರೆಸಾರ್ಟುಗಳ ಮಾಲೀಕರೊಂದಿಗೆ ಸಭೆಯನ್ನು ನಡೆಸಿ, ಸದರಿಯವರುಗಳಿಗೆ ಈ ಕೆಳಕಂಡಂತೆ ಸೂಕ್ತ ಸೂಚನೆಗಳನ್ನು ನೀಡಲಾಗಿದೆ:-

1) ಹೋಂ ಸ್ಟೇ, ಪ್ರವಾಸಿಗರ ಮಾಹಿತಿಯನ್ನು ದಾಖಲು ಮಾಡಿಕೊಳ್ಳಲು ಕಡ್ಡಾಯವಾಗಿ ರಿಜಿಸ್ಟರ್ ವ್ಯವಸ್ಥೆ ಮಾಡಿಕೊಳ್ಳುವುದು.
2) ವಿದೇಶಿಯರ ಆಗಮನ ಮಾಹಿತಿಯನ್ನು ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ಫಾರಂ-ಸಿ ಭರ್ತಿ ಮಾಡಿ ಪೊಲೀಸ್ ಠಾಣೆಗೆ ಪ್ರತಿಯನ್ನು ಸಲ್ಲಿಸುವುದು.
3) ಪಬ್ಲಿಕ್ ಸೇಫ್ಟಿ ಆ್ಯಕ್ಟ್ ಅಡಿಯಲ್ಲಿ ವಿದೇಶಿ ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಕಡ್ಡಾಯವಾಗಿ ಸೂಕ್ತ ಸ್ಥಳಗಳಲ್ಲಿ ಸಿಸಿಟಿವಿಗಳನ್ನು ಅಳವಡಿಸಿಕೊಳ್ಳುವುದು.

ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಆನೆಗುಂದಿ, ಸಣಾಪೂರ, ಬಸಾಪೂರ ಮತ್ತು ಸುತ್ತಮುತ್ತಲಿನ ಸ್ಥಳಗಳಲ್ಲಿ ಹೆಚ್ಚುವರಿಯಾಗಿ ಹೆದ್ದಾರಿ ಗಸ್ತು ವಾಹನವನ್ನು ನಿಯೋಜಿಸಿದೆ. ಆನೆಗುಂದಿ, ಸಣಾಪೂರ ಮುಖ್ಯ ರಸ್ತೆಗಳಲ್ಲಿ ಜಿಗ್‌ಜ್ಯಾಗ್ ಬ್ಯಾರಿಕೇಡುಗಳನ್ನು ಅಳವಡಿಸಿ ನಿರಂತರವಾಗಿ ವಾಹನಗಳ ತಪಾಸಣೆ ನಡೆಸಲಾಗುತ್ತಿದೆ. ಈ ಭಾಗದಲ್ಲಿ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಮೇಲು ಉಸ್ತುವಾರಿ ಕುರಿತು ಒಬ್ಬ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಯವರನ್ನು ರಾತ್ರಿ ಗಸ್ತು ಕರ್ತವ್ಯಕ್ಕಾಗಿ ನಿಯೋಜಿಸಲಾಗಿರುತ್ತದೆ.

ಮುಂದುವರೆದು, ಸರ್ಕಾರವು ಸುತ್ತೋಲೆ ಸಂಖ್ಯೆ: ಒಇ 05 ಅಮುಕಾ 2025, ದಿನಾಂಕ:10.03.2025ರಲ್ಲಿ ಇಂತಹ ಘಟನೆಗಳು ಭವಿಷ್ಯತ್ತಿನಲ್ಲಿ ಜರುಗದ ರೀತಿಯಲ್ಲಿ ಮುನ್ನೆಚ್ಚರಿಕೆ ವಹಿಸಲು ಈ ಕೆಳಕಂಡ ಸೂಚನೆಗಳನ್ನು ಹಾಗೂ ನಿರ್ದೇಶನಗಳನ್ನು ನೀಡಲಾಗಿದೆ:-

a) ರಾಜ್ಯದ ಪ್ರವಾಸಿ ತಾಣಗಳಲ್ಲಿನ ಹೋಮ್‌ಸ್ಟೇಗಳು ವಿದೇಶಿ ಪ್ರವಾಸಿಗರನ್ನು ಒಳಗೊಂಡಂತೆ ಎಲ್ಲಾ ಪ್ರವಾಸಿಗರ ಭದ್ರತೆ ಹಾಗೂ ಸುರಕ್ಷತೆಗಾಗಿ ಸೂಕ್ತ ಕ್ರಮಗಳನ್ನು ಕಡ್ಡಾಯವಾಗಿ ತೆಗೆದುಕೊಳ್ಳತಕ್ಕದ್ದು.

b) ಹೊರವಲಯಗಳಲ್ಲಿ ಅಥವಾ ನಿರ್ಜನ ಪ್ರದೇಶಗಳಿಗೆ ಪ್ರವಾಸಿಗರನ್ನು ಕರೆದೊಯ್ಯುವ ಮುಂಚಿತವಾಗಿ ಸಂಬಂಧಿಸಿದ ಅಧಿಕಾರ ವ್ಯಾಪ್ತಿಯುಳ್ಳ ಪೊಲೀಸ್ ಠಾಣೆಯಲ್ಲಿ ಮಾಹಿತಿಯನ್ನು ನೀಡಿ, ಅನುಮತಿ ಪಡೆಯತಕ್ಕದ್ದು.

c) ಪೊಲೀಸರಿಂದ/ಅರಣ್ಯ ಇಲಾಖೆ ಸಿಬ್ಬಂದಿಯಿಂದ ಪೂರ್ವಾನುಮತಿಯನ್ನು ಪಡೆಯದೇ ನಿರ್ಜನ ಪ್ರದೇಶ/ಹೊರವಲಯ ಅಥವಾ ಅರಣ್ಯ ಪ್ರದೇಶಗಳಲ್ಲಿ ಪ್ರವಾಸಿಗರನ್ನು ಕರೆದೊಯ್ಯಲ್ಲಿ ದುಷ್ಕರ್ಮಿಗಳಿಂದ ಅಥವಾ ಕಾಡು ಪ್ರಾಣಿಗಳಿಂದ ಸಂಭವಿಸುವ ದುರ್ಘಟನೆಗಳಿಗೆ ಆಯಾ ಹೋಮ್ ಮಾಲೀಕರೆ ಜವಾಬ್ದಾರರಾಗುತ್ತಾರೆ ಹಾಗೂ ಕಾನೂನಿನ್ವಯ ಶಿಕ್ಷಾರ್ಹ ಅಪರಾಧಕ್ಕೆ ಒಳಪಡುತ್ತಾರೆ

d) ಈ ಸಂಬಂಧ ಅಗತ್ಯ ಸೂಚನೆಗಳನ್ನು ಎಲ್ಲಾ ಜಿಲ್ಲೆಯ ಪ್ರತಿ ರೆಸಾರ್ಟ್ ಹಾಗೂ ಹೋಮ್ ಸ್ಟೆಗಳಿಗೆ ಖುದ್ದಾಗಿ ಜಾರಿಗೊಳಿಸಿ ಅವರಿಂದ ಸೂಕ್ತ ಮುಚ್ಚಳಿಕೆ ಪಡೆದುಕೊಳ್ಳುವುದು. ಪ್ರತಿ ರೆಸಾರ್ಟ್/ಹೋಮ್ ಸ್ಟೇಗಳಿಂದ ಅವರ ಸ್ಥಳ ವೀಕ್ಷಣಾ ಕಾರ್ಯಕ್ರಮಗಳ ಪಟ್ಟಿಯನ್ನು ಪಡೆದು ಆ ಕಾರ್ಯಕ್ರಮಗಳಲ್ಲಿ ಯಾವುದೇ ಅಪಾಯವಿಲ್ಲದಿರುವುದನ್ನು ಖಾತರಿಪಡಿಸಿಕೊಳ್ಳಲು ತಿಳಿಸಲಾಗಿದೆ. ಸುತ್ತೋಲೆಯಲ್ಲಿನ ಸೂಚನೆಗಳ ಕುರಿತು ಒಂದು ವಾರದಲ್ಲಿ ಅಗತ್ಯ ಕ್ರಮ ಕೈಗೊಂಡು ದಿನಾಂಕ:18.03.2025 ರೊಳಗೆ ತಪ್ಪದೇ ವರದಿಯನ್ನು ಸಲ್ಲಿಸಲು ಸೂಚಿಸಲಾಗಿದೆ.

ಸಂಖ್ಯೆ:ಹೆಚ್‌ಡಿ 12 ಎಸ್‌ಡಿಎನ್ 2025

(ಡಾ|| ಜಿ. ಪರಮೇಶ್ವರ)
ಗೃಹ ಸಚಿವರು